**ದಿನಾಂಕಃ 14.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ 4 ನೇ ಪ್ರತಿವಾದಿಪರ ವಕೀಲರಾದ ಶ್ರೀಮತಿ ಎಸ್.ಟಿ.ಯು ಅವರಿಂದ–**

1. ನಾನು ಡಿಗ್ರಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾತ ಹೂನ್ನೇಗೌಡ ಅವರು ತೀರಿಹೋಗಿ 3–4 ವರ್ಷಗಳಾಗಿವೆ. ದಾವ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಮ್ಮ ತಾತ ಇದ್ದ ಕಾಲದಲ್ಲಿಯೇ ಎಲ್ಲ ಹೆಣ್ಣು ಹಾಗೂ ಗಂಡು ಮಕ್ಕಳ ಮದುವೆ ಮಾಡಿದ್ದರು ಎಂದರೆ ಸರಿ. ಕುಟುಂಬದ ಎಲ್ಲ ವ್ಯವಹಾರವನ್ನು ನಮ್ಮ ತಾತನವರೆ ಮಾಡುತ್ತಿದ್ದರು ಎಂದರೆ ಸರಿ. ನಮ್ಮದು ಮರ್ಯಾದಸ್ಥರ ಮನೆತನವಾಗಿದೆ ಎಂದರೆ ಸರಿ. ಎಲ್ಲಾ ವ್ಯವಹಾರಗಳು ನೇರವಾಗಿ ಹಾಗೂ ಮುಕ್ತವಾಗಿ ಎಲ್ಲರಿಗೂ ತಿಳುವಳಿಕೆ ಇರುವಂತೆ ನಡೆಯುತ್ತಿದ್ದವು ಎಂದರೆ ಸರಿ.

2. ಕೇಸಿನ ವಿಚಾರವನ್ನು ನನ್ನ ತಾಯಿಯ ತಾಯಿ ಅಂದರೆ ನನ್ನ ಅಜ್ಜಿ ಹೇಳಿ ಬರೆಯಿಸಿರುತ್ತಾರೆ. ಈ ದಾವೆಯ ವಿಚಾರ ಸಂಪೂರ್ಣವಾಗಿ ನನಗೆ ಗೊತ್ತು. ವಾದಪತ್ರದ 5 ನೇ ಪ್ಯಾರಾದಲ್ಲಿ ನಮ್ಮ ಕುಟುಂಬದಲ್ಲಿ 10 ವರ್ಷಗಳ ಹಿಂದೆಯೆ ಮೌಖಿಕವಾಗಿ ವಿಭಾಗವಾಗಿದೆ ಎಂದು ತಿಳಿಸಿರುವ ವಿಚಾರ ನಿಜವಾಗಿರುತ್ತದೆ. ಅದೇ ರೀತಿ 2 ಹಾಗೂ 3 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ 20 ವರ್ಷಗಳ ಹಿಂದೆಯೆ ಮೌಖಿಕವಾಗಿ ವಿಭಾಗವಾಗಿದೆ ಎಂದು ತಿಳಿಸಿರುವ ವಿಚಾರ ನಿಜವಾಗಿರುತ್ತದೆ.

3. ಸರ್ವೇ ನಂ.23 ರ ಒಟ್ಟು 3 ಎಕರೆ 7 ಗುಂಟೆ ಸ್ವತ್ತು ನಮ್ಮ ತಾತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅದೇ ಜಮೀನು ಈಗ ಸರ್ವೇ ನಂ.23/1 ಹಾಗೂ 23/2 ಎಂದು ಆಗಿದೆ ಎಂದರೆ ಸರಿ. ದಾವಾ 1 ನೇ ಐಟಂ ಸರ್ವೇ ನಂ.23/1 ರಲ್ಲಿ 1 ಎಕರೆ 26 ಗುಂಟೆ, 2 ನೇ ಐಟಂ ಸರ್ವೇ ನಂ.23/2 ರಲ್ಲಿ 1 ಎಕರೆ 21 ಗುಂಟೆ ಎಂದು ಆಗಿದೆ ಎಂದರೆ ಸರಿ.

4. 2 ನೇ ಐಟಂನಲ್ಲಿ ಸರ್ವೇ ನಂ.23/2 ರಲ್ಲಿ 1 ಎಕರೆ 21 ಗುಂಟೆ ಪೈಕಿ 20 ಗುಂಟೆ ಜಮೀನನ್ನು 2 ಹಾಗೂ 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯನ್ನು ಏಕೆ ಈ ದಾವೆಯಲ್ಲಿ ಸೇರ್ಪಡೆ ಮಾಡಿರುತ್ತೇನೆ ಎಂದರೆ ಅವರು ನಮ್ಮ ತಾತನ ಜಮೀನಿಗೆ ಬಂದು ಗಲಾಟೆ ಮಾಡಿದ್ದಾರೆ ಆದ್ದರಿಂದ ಸೇರ್ಪಡೆ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

5. ದಿಃ 22.10.2018 ರಲ್ಲಿ 2 ಹಾಗೂ 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುವ ಸದರಿ 20 ಗುಂಟೆ ಜಮೀನಿನಲ್ಲಿ ಈಗ ನರ್ಸರಿ ಇದೆ, ವಿದ್ಯುತ್ ಚ್ಚಕ್ತಿ ಸಂಪರ್ಕ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಬೋರ್ ವೆಲ್ ಇದೆ ಹಾಗೂ ಪಂಪ್ ಹೌಸ್ ಕೂಡ ಇದೆ ಎಂದರೆ ಸರಿ. ಇದೆಲ್ಲವನ್ನು 4 ನೇ ಪ್ರತಿವಾದಿ ಸದರಿ 20 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದ ನಂತರ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಹಾಗೂ 3 ನೇ ಪ್ರತಿವಾದಿಗಳು ಮಾಡಿರುತ್ತಾರೆ. ಹಾಗಿದ್ದರೆ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಸದರಿ ಜಮೀನು 4 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದು ತಿಳಿಯಿತು ಎಂದರೆ ಸರಿ. ಸರ್ವೇ ನಂ. 23/2 ರಲ್ಲಿ ಉಳಿಕೆ ಜಮೀನು 1 ಎಕರೆ 1 ಗುಂಟೆ ಸ್ವತ್ತು 2 ಹಾಗೂ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ.

6. ಪ್ರಸ್ತುತ ದಾವೆಯಲ್ಲಿ 4 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುವ 20 ಗುಂಟೆ ಜಮೀನಿನ್ನು 3 ನೇ ಐಟಂ ಸ್ವತ್ತು ಎಂದು ಸೇರ್ಪಡೆ ಮಾಡಿರುತ್ತೇವೆ ಎಂದರೆ ಸರಿ. ಸರ್ವೇ ನಂ.15/1 ರಲ್ಲಿ 34 ಗುಂಟೆ ನನ್ನ ತಾತ ಹೊನ್ನೇಗೌಡರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಸ್ವತ್ತನ್ನು ಹೊನ್ನೇಗೌಡರು ನನ್ನ ತಾಯಿ 5 ನೇ ಪ್ರತಿವಾದಿಗೆ ದಿಃ 10.01.2018 ರಲ್ಲಿ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಐಟಂ ನಂ.5 ಸರ್ವೇ ನಂ.15/2 ರಲ್ಲಿ 1 ಎಕರೆ ಜಮೀನನ್ನು ದಿಃ16.02.2016 ರಲ್ಲಿ 2 ಹಾಗೂ 3 ನೇ ಪ್ರತಿವಾದಿಗಳಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ.

**7.** ಐಟಂ ನಂ.6 ಸರ್ವೇ ನಂ.26/6 ಕ್ಕೆ ಸಂಬಂಧಪಟ್ಟಂತೆ ನಾವು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ, ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾತ ಹೊನ್ನೇಗೌಡರ ತಾಯಿಯ ಹೆಸರು ಹೊನ್ನಮ್ಮ ಎಂದರೆ ಸರಿ. ಐಟಂ ನಂ.6 ಸರ್ವೇ ನಂ.26/6 ರ ಸ್ವತ್ತು 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ ಸ್ವತ್ತಾಗಿದೆ ಎಂದರೆ ಸರಿಯಲ್ಲ.

8. ದಾವ ಸ್ವತ್ತುಗಳಲ್ಲದೆ ಸರ್ವೇ ನಂ.17/1 ರಲ್ಲಿ 20 ಗುಂಟೆ ಜಮೀನು ನನ್ನ ತಾತ ಹೊನ್ನೇಗೌಡರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ 20 ಗುಂಟೆ ಜಮೀನಿನಲ್ಲಿ ನನ್ನ ತಂದೆ 1 ನೇ ಪ್ರತಿವಾದಿ ಹಾಗೂ ಅವರ ತಮ್ಮ 2 ನೇ ಪ್ರತಿವಾದಿಗಳಿಗೆ ತಲಾ 10 ಗುಂಟೆ ಜಮೀನು ವಿಭಾಗದಲ್ಲಿ ಬಂದಿದೆ ಎಂದರೆ ಸರಿಯಲ್ಲ.

9. ಸರ್ವೇ ನಂ.26/4 ರಲ್ಲಿ 31 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸಿದ್ದಮ್ಮ ಯಾರು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.26/4 ರಲ್ಲಿ 31 ಗುಂಟೆ ಜಮೀನು ನನ್ನ ತಂದೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

10. ನನ್ನ ತಾತನ ತಂದೆ ದೊಡ್ಡತಮ್ಮ ಎಂದರೆ ಸರಿ. ಅವರ ಹೆಸರಿನಲ್ಲಿ 24 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಸ್ವತ್ತು ನನ್ನ ತಂದೆ 1 ನೇ ಪ್ರತಿವಾದಿ ಹಾಗೂ ಅವರ ತಮ್ಮ 2 ನೇ ಪ್ರತಿವಾದಿಗಳಿಗೆ ತಲಾ ಅರ್ಧ ಭಾಗ ಜಮೀನು ವಿಭಾಗ ಆಗಿದೆ ಎಂದರೆ ಸರಿಯಲ್ಲ. ದೊಡ್ಡತಮ್ಮೇಗೌಡರ ಮಗ ಹೊನ್ನೇಗೌಡ ಅಂದರೆ ನನ್ನ ತಾತನ ಹೆಸರಿನಲ್ಲಿ ಈಗಲೂ ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ಪ್ರಸ್ತುತ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಆ ಮನೆಯಲ್ಲಿ ನನ್ನ ಅಜ್ಜಿ ವಾಸವಾಗಿದ್ದಾರೆ. 1 ಹಾಗೂ 2 ನೇ ಪ್ರತಿವಾದಿಗಳು ಸದರಿ ಮನೆಯಲ್ಲಿ ಅರ್ಧರ್ಧ ಭಾಗದಲ್ಲಿ ವಾಸವಾಗಿದ್ದರು ಎಂದರೆ ಸರಿ. ಈಗ ನನ್ನ ಅಜ್ಜಿ ವಾಸವಾಗಿದ್ದಾರೆ.

11. ಈಗ ನಾವು ಅಂದರೆ ನಾನು ಹಾಗೂ ನಮ್ಮ ತಂದೆ ಪ್ರತ್ಯೇಕವಾಗಿ ಕಟ್ಟಿ ವಾಸವಾಗಿರುವ ಮನೆ ಸರ್ವೇ ನಂ.10 ರಲ್ಲಿ ಇದೆ. ಸರ್ವೇ ನಂ.17/1 ರಲ್ಲಿ ಸದರಿ ಮನೆ

ಇದೆ ಎಂದರೆ ಸರ್ವೇ ನಂಬರ್ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂ.17/1 ರಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪನಿಗೆ ಬಂದಿದ್ದ ಅರ್ಧರ್ಧ ಭಾಗದಲ್ಲಿ ನಮ್ಮ ಪಾಲಿನ 10 ಗುಂಟೆ ಜಮೀನಿನಲ್ಲಿ ನಾವು ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಾವು ಅದರಲ್ಲಿ ವಾಸವಾಗಿಲ್ಲ, ಅದನ್ನು ನಾವು ಕಟ್ಟಿಲ್ಲ. ಸದರಿ ಸರ್ವೇ ನಂ.17/1 ರಲ್ಲಿ ಇರುವ ಮನೆಯನ್ನು ನನ್ನ ತಾತನವರೆ ಕಟ್ಟಿದ್ದರು.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.